ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ.

**ಸಿಸಿಃ ನಂಃ2110ಃ2018**

| ಸಿಡಬ್ಲ್ಯೂ 3 | **ಪಿಡಬ್ಲ್ಯೂಃ 03** |
|---|---|
| **ಸಾಕ್ಷಿದಾರನ ಹೆಸರು** | ಪರಶುರಾಮ |
| **ತಂದೆ/ಗಂಡ/ತಾಯಿ ಹೆಸರು** | ಹುಲುಗಯ್ಯ |
| **ವಯಸ್ಸು** | **64 ವರ್ಷ** |
| **ಉದ್ಯೋಗ** | ಒಕ್ಕಲುತನ |
| **ವಾಸಸ್ಥಳ** | ಬಸಾಪಟ್ಟಣ |
| **ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು** | **ದಿನಾಂಕಃ 28-06-2022** |

**ಮುಖ್ಯ ವಿಚಾರಣೆ** ಃ ಸ ಸ ಅ ರವರಿಂದ

ಚಸಾಃ **2** ರವರ ಪರಿಚಯ ಇದೆ. ಚಸಾಃ **4** ರಿಂದ **21** ರವರ ಪರಿಚಯ ಇರುವುದಿಲ್ಲ. ಶರಣಬಸಪ್ಪ ತಂದೆ ದುರುಗಪ್ಪ ರವರ ಪರಿಚಯ ಇರುವುದಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ಸುಮಾರು **4** ವರ್ಷಗಳ ಹಿಂದೆ ನಾನು ಹಾಗೂ ನನ್ನ ಸ್ನೇಹಿತ ಮೋಟಾರ್ ಸೈಕಲ್ ಮೇಲೆ ಹೋಗುತ್ತಿರುವಾಗ ಪೋಲಿಸರು ನಮ್ಮನ್ನು ನಿಲ್ಲಿಸಿ ನಮಗೆ ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇವೆ ಹಾಗೂ ನಮ್ಮ ನಿಲ್ಲಿಸಿ ಭಾವ ಚಿತ್ರವನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಗೆ ನಿಪಿಃ **2** ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿಃ **2**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿಃ **3** ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿಃ **3**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿಃ **4** ಹಾಗೂ **5** ರಲ್ಲಿ ತಾನು ಇರುವುದನ್ನು ನೋಡಿ ಗುರುತಿಸುತ್ತಾರೆ.

**( ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಸಅ ರವರಿಂದ,**

ದಿನಾಂಕಃ **17-9-2017** ರಂದು ಆದ ಅಪಘಾತ ಕುರಿತು ಪೋಲಿಸರು ನನ್ನ ಸಮಕ್ಷಮ ಪೋಲಿಸರು ಗುನ್ನಾ ಜಾಗೆ ಪಂಚನಾಮೆಯನ್ನು ಬೆಳೆಗ್ಗೆ **8.30** ಗಂಟೆಯಿಂದ **9.30** ಗಂಟೆಯವರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ **18-9-2017** ರಂದು ನನ್ನ ಸಮಕ್ಷಮ ಬೆಳೆಗ್ಗೆ **10.00** ಗಂಟೆಯಿಂದ **11.00** ಗಂಟೆಯವರೆಗೆ ವಾಹನ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರು ಸಹಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ

ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ಇಂದು **ದಿನಾಂಕಃ-28-06-2022** ರಂದು ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**).**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಪ್ರ ದ ನ್ಯಾ ದಂ ಗಳು,**
**ಗಂಗಾವತಿ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ.

**ಸಿಸಿಃ ನಂಃ2110ಃ2018**

| | |
|---|---|
| ಸಿಡಬ್ಲ್ಯೂ 2 | **ಪಿಡಬ್ಲ್ಯೂಃ 02** |
| **ಸಾಕ್ಷಿದಾರನ ಹೆಸರು** | ಹನುಮಂತರಾಯ |
| **ತಂದೆ/ಗಂಡ/ತಾಯಿ ಹೆಸರು** | ಈರಣ್ಣ |
| **ವಯಸ್ಸು** | **56 ವರ್ಷ** |
| **ಉದ್ಯೋಗ** | ವ್ಯವಹಾರ |
| **ವಾಸಸ್ಥಳ** | ವಡ್ಡರಹಟ್ಟಿ |
| **ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು** | **ದಿನಾಂಕಃ 28-06-2022** |

**ಮುಖ್ಯ ವಿಚಾರಣೆ** ಃ ಸ ಸ ಅ ರವರಿಂದ

ಚಸಾಃ **1** ರವರ ಪರಿಚಯ ಇರುವುದಿಲ್ಲ. ಚಸಾಃ **3** ರವರ ಪರಿಚಯ ಇದೆ. ಚಸಾಃ **4** ರಿಂದ **21** ರವರ ಪರಿಚಯ ಇರುವುದಿಲ್ಲ. ಶರಣಬಸಪ್ಪ ತಂದೆ ದುರುಗಪ್ಪ ರವರ ಪರಿಚಯ ಇದೆ.

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ಸುಮಾರು **4** ವರ್ಷಗಳ ಹಿಂದೆ ನಾನು ಹಾಗೂ ನನ್ನ ಸ್ನೆಹಿತ ಮೋಟಾರ್ ಸೈಕಲ್ ಮೇಲೆ ಹೋಗುತ್ತಿರುವಾಗ ಪೋಲಿಸರು ನಮ್ಮನ್ನು ನಿಲ್ಲಿಸಿ ನಮ್ಮ ಮೋಟಾರ್ ಸೈಕಲನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ ನಾನು ಪೋಲಿಸ್ ಠಾಣೆಯಲ್ಲಿ ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ನಾನು ಒಂದು ಕಾಗಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಗುನ್ಹಾ ಜಾಗೆಯ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಪಘಾತದಲ್ಲಿ ಭಾಗಿಯಾದ ವಾಹನದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿಃ **3** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿಃ **3(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಭಾವ ಚಿತ್ರಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿಃ **4** ಹಾಗೂ **5** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿಃ **4** ಮತ್ತು **5** ನ್ನು ಯಾವ ಸಂದರ್ಬದಲ್ಲಿ ತೆಗೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ.

**( ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಸಅ ರವರಿಂದ,**

ದಿನಾಂಕಃ **17-9-2017** ರಂದು ಒಂದು ಟ್ರಾಕ್ಟರ್ ಅಪಘಾತ ಪಡಿಸಿರುವ ಕುರಿತು ನನ್ನ ಸಮಕ್ಷಮ

ಪೋಲಿಸರು ಗುನ್ಹಾ ಜಾಗೆ ಪಂಚನಾಮೆಯನ್ನು ಬೆಳಿಗ್ಗೆ **8.30** ಗಂಟೆಯಿಂದ **9.30** ಗಂಟೆಯವರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ **18-9-2017** ರಂದು ನನ್ನ ಸಮಕ್ಷಮ ಬೆಳಿಗ್ಗೆ **10.00** ಗಂಟೆಯಿಂದ **11.00** ಗಂಟೆಯವರೆಗೆ ವಾಹನ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರು ಸಹಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕಃ-28-06-2022 ರಂದು ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಪ್ರ ದ ನ್ಯಾ ದಂ ಗಳು,**
**ಗಂಗಾವತಿ.**